ಶ್ರೀ ಜೆ. ಎರ್. ಕಬಾಡಿ.—ಆಹಾರವನ್ನು ಒದಗಿಸುವ ಒಂದೊಂದು ಅಂಗಡಿಯಲ್ಲಿಯೂ ಈ ಖೋಟಾ ಚೀಟಿಗಳು 500ಕ್ಕೂ ಹೆಚ್ಚು ಇವೆ ಎಂದು ಡಿ.ಸಿ. ಅವರಿಗೆ ದೂರು ಕೊಟ್ಟರೂ ಸಹ ಆ ಬಗ್ಗೆ ಅವರಿಗೆ ಅಂಕಿಅಂಶಗಳನ್ನು ಹುಡುಕುವುದಕ್ಕೆ ಸಾಧ್ಯವಾಗದಿರುವುದಕ್ಕೆ ಕಾರಣವೇನು ?

ಶ್ರೀಮತಿ ಇ. ಇ. ವಾಜ್:—ಈ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡಬಹುದು.

Elections to Taluk Development Boards

221 Sri T. R. SHAMANNA (Fort).—

Will the Minister for Rural Development and Social Welfare be pleased to state;—

(*a*) when the Taluk Development Board elections are proposed to be held;

(*b*) the steps taken so far to hold Taluk Development Board elections ?

Sri N. RACHAIAH (Minister for Rural Development and Social Welfare).—

(*a*) The General Elections to the Taluk Development Boards are proposed to be held as early as possible.

(*b*) Necessary steps are being taken by Government to hold elections to the Taluk Development Boards in accordance with the Statutory provisions of the Karnataka Village Panchayats and Local Boards Act, 1959 and the rules issued thereunder.

ಶ್ರೀ ಟಿ. ಆರ್. ಶಾಮಣ್ಣ.—1971ರಲ್ಲಿ ಸೆನ್‌ಸಸ್ ಆಯಿತು. ಅದರ ಒಂದು ಆಧಾರದ ಮೇಲೆ 1974ನೇ ಇಸವಿಯಲ್ಲಿಯೇ ಚುನಾವಣೆಯಾಗಬೇಕಾಗಿತ್ತು. ಆದರೂ ತಡವಾಗುತ್ತಿರುವುದಕ್ಕೆ ಕಾರಣವೇನು ? ಇದರಲ್ಲಿ ದುರುದ್ದೇಶವೇನಾದರೂ ಇದೆಯೇ ಅಥವಾ ಅಧಿಕಾರಿಗಳ ಅದಕ್ಷತೆಯಿಂದ ಏನಾದರೂ ನಿಧಾನವಾಗುತ್ತಿದೆಯೇ ಹೇಗೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಎನ್. ರಾಚಯ್ಯ.—ಇದರಲ್ಲಿ ದುರುದ್ದೇಶವೇನೂ ಇಲ್ಲ. ಈ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ಈ ಸಭೆಯ ಮುಂದೆ ಮಂಡನೆ ಮಾಡಬೇಕೆಂದು ಕೆಲವರು ಪ್ರಯತ್ನ ಪಟ್ಟಾಗ ನಾನು ಈ ಬಗ್ಗೆ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ. ಇಲ್ಲಿ ಉದ್ದೇಶ ಏನಿದೆ ಎಂದರೆ, 1975ನೇ ಇಸವಿ ಜನವರಿ ತಿಂಗಳಲ್ಲಿ ಚುನಾವಣೆ ನಡೆಸಬೇಕೆಂದು ನಾವು ನಿರ್ದಿಷ್ಟವಾಗಿ ಕಾರ್ಯಕ್ರಮ ಹಾಕಿಕೊಂಡಿದ್ದೆವು. ಆದರೆ ಮುಖ್ಯ ಚುನಾವಣಾಧಿಕಾರಿಗಳಿಂದ ಒಂದು ಸಲಹೆ ನಮಗೆ ಬಂತು. ಏನೆಂದರೆ ನಾವು ತಾ : 1-1-1975ರಿಂದ ಮತದಾರರ ಪಟ್ಟಿಯನ್ನು ರಿವೈಸ್ ಮಾಡುತ್ತೇವೆ ; 1-1-1971ರಿಂದೀಚೆಗೆ ರಿವೈಸ್ ಮಾಡಿಲ್ಲ ; ಉಪಚುನಾವಣೆಗಳು ನಡೆದ ಕಡೆ ಮಾತ್ರ ಈ ರಿವೈಸ್ ಮಾಡಲಾಗಿದೆಯೇ ಹೊರತು ಉಳಿದ ಕಡೆಗಳಲ್ಲಿ ರಿವೈಸ್ ಮಾಡಿಲ್ಲ; ಆದಕಾರಣ ಈ ಚುನಾವಣೆಯನ್ನು ಸ್ವಲ್ಪ ಮುಂದೆ ಹಾಕುವುದು ಒಳ್ಳೆಯದು, ನಾವು ಜೂನ್ ತಿಂಗಳೊಳಗೆ ಹೊಸ ಮತದಾರರ ಪಟ್ಟಿಯನ್ನು ತಯಾರು ಮಾಡುತ್ತೇವೆಂದು ಹೇಳಿದ್ದಾರೆ. ಅವರ ಸೂಚನೆಯನ್ನು ನಾವು ಒಪ್ಪಿಕೊಳ್ಳದಿದ್ದರೆ ಇತ್ತೀಚೆಗೆ ಮತದಾನದ ಹಕ್ಕು ಹೊಂದಿರುವ ಲಕ್ಷೋಪಲಕ್ಷ ಜನರಿಗೆ ಮತದಾನದಲ್ಲಿ ಭಾಗವಹಿಸಲು ಅವಕಾಶ ಸಿಗುತ್ತಿರಲಿಲ್ಲ ; ಜೊತೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತಹ ರೆವಿನ್ಯೂ ಅಧಿಕಾರಿಗಳೇ ಮತದಾರರ ಪಟ್ಟಿಯನ್ನು ಸಹ ಪರಿಶೀಲನೆ ಮಾಡುವವರಾಗಿದ್ದರು. ಈ ಎರಡು ಕೆಲಸಗಳನ್ನು ಅವರೇ ಮಾಡಲು ಸಾಧ್ಯವಿಲ್ಲ. ಮತ್ತು ಅನೇಕ ಕಡೆಗಳಿಂದ ನಮಗೆ ಅಕ್ಷೇಪಣೆಗಳು ಬಂದಿವೆ—ಏನೆಂದರೆ ಚುನಾವಣೆ ಮಾಡಬೇಕಾದರೆ ಮತದಾರರ ಪಟ್ಟಿಯನ್ನು ರಿವೈಜ್ ಮಾಡಿ ಎಂದು. ಈ ಎಲ್ಲ ಕಾರಣಗಳಿಂದಲೂ, ನಾವು ಇದನ್ನು ಸ್ವಲ್ಪ ಮುಂದೂಡಬೇಕಾಯಿತೇ ಹೊರತು, ಬೇರೆ ಯಾವ ದುರುದ್ದೇಶದಿಂದಾಗಲೀ, ಅಥವಾ ಅಧಿಕಾರಿಗಳಿಂದಾಗಲೀ ಅಲ್ಲ. ಇದನ್ನು ಅನಿವಾರ್ಯವಾಗಿ ಮುಂದೂಡಬೇಕಾಯಿತು.

ಅಧ್ಯಕ್ಷರು.—ಇದರ ಬಗ್ಗೆ ಈಗಾಗಲೇ ಸ್ಟೇಟ್‌ಮೆಂಟ್ ಆಗಿರುವುದರಿಂದ, ಬೇರೆ ಪ್ರಶ್ನೆಗಳು ಅನಾವಶ್ಯಕ.

1-30 P.M.

S. C./S. T. Financial Corporation

226. **Sri M. H. JAYAPRAKASH NARAYAN** (Sirsi) —

Will the Minister for Rural Development and Social Welfare be pleased to state :—

(*a*) when the Government has taken decision for the establishment of Karnataka State Scheduled Castes and Scheduled Tribes Financial Corporation in the State ;

(*b*) the total share capital amount allotted by Government to the proposed Corporation to undertake all economic development Schemes in Commerce, Industries and Trade and to give necessary financial assistance to Scheduled Castes and Scheduled Tribes people ;

(*c*) the investment made by Government at present for setting up such Corporation ;

(*d*) when the Corporation will come into existence and the reason for the delay for establishment of the Corporation ?

Sri N. RACHAIAH (Minister for Rural Development and Social Welfare). —

(*a*) Government have sanctioned setting up the Corporation during August 1974.

(*b*) Rs. One Crore.

(*c*) Rs. 25,00,000·

(*d*) As soon as the formalities regarding its registration etc., are completed.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಸ್ವಾಮಿ, ಆನುಸೂಚಿತ ಜಾತಿ ಹಾಗೂ ಆನುಸೂಚಿತ ಪಡಿಮ ಜಾತಿಯವರ ನಂಸ್ಥೆಯನ್ನು ವರ್ಷದ ಪ್ರಾರಂಭದಲ್ಲಿ ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಮತ್ತು ಬಡ್ಜೆಟ್ ಭಾಷಣದಲ್ಲೂ ತಕ್ಷಣ ಮಾಡುತ್ತೇವೆ ಎಂದು ಅಭಯವನ್ನೂ ಕೊಟ್ಟಿದ್ದೀರಿ. ಬಡ್ಜೆಟ್‌ನಲ್ಲಿ ಇದಕ್ಕಾಗಿ ಹಣವನ್ನು ಒದಗಿಸಿದ್ದರೂ ಸಹ 9-10 ತಿಂಗಳು ಮುಂದಕ್ಕೆ ಇವನ್ನು ತಳ್ಳಿದ್ದೀರಿ. ಇದನ್ನು ಈ ವರ್ಷಕ್ಕೆ ಮಾಡದಿರುವುದಕ್ಕೆ ಕಾರಣವೇನು ? ಹರಿಜನೋದ್ಧಾರ, ರಾಷ್ಟ್ರೋದ್ಧಾರ ಎಂದು ಹೇಳತಕ್ಕ ಕಾಂಗ್ರೆಸ್ ಸರಕಾರ ಈ ವಿಷಯದಲ್ಲಿ ಮಂದಗಾಮಿತನ ಮಾಡುವುದಕ್ಕೆ ಕಾರಣವೇನು ?

† ಶ್ರೀ ಎನ್. ರಾಚಯ್ಯ.—ವರ್ಷದ ಆದಿ ಭಾಗದಲ್ಲಿ ಎಲ್ಲಾ ಇಲಾಖೆಗಳಿಗೂ ಎಕಾನಮಿ ಆರ್ಡರ್‌ನ್ನು ಅನ್ವಯಿಸಿದ್ದರಿಂದ, ಈ ಕೆಲಸವನ್ನು ನಕಾಲದಲ್ಲಿ ಮಾಡಲು ಸ್ವಲ್ಪ ತಡವಾಯಿತು. ಇದರಮೇಲೆ, ನಂಸ್ಥೆಯನ್ನು ನಂಸ್ಥಾಪನೆ ಮಾಡತಕ್ಕ ವಿಚಾರದಲ್ಲಿ ಕ್ಯಾಬಿನೆಟ್‌ನ ಅನುಮೋದನೆ ಆಗಬೇಕಾಯಿತು. ಎಲ್ಲಾ ಫಾರ್ಮಲೆಟೀಸ್ ಮಾಡಿ, ಕಾಬಿನೆಟ್‌ನ ಅನುಮೋದನೆಯನ್ನೂ ಸಹ ಈಗ ತೆಗೆದುಕೊಂಡಿದ್ದೇವೆ. ಇನ್ನೂ ಬೇರೆ ಫಾರ್ಮಾಲಿಟೀಸ್ ಅಂದರೆ, ರಿಜಿಸ್ಟ್ರೇಷನ್ ಮತ್ತೆ. ರಾಜ್ಯಪಾಲರ ಅಸೆಂಟ್—ಇವೆಲ್ಲಾ ಆಗಬೇಕಾಗಿರುವುದರಿಂದ, ಸ್ವಲ್ಪ ತಡವಾಗಿದೆ. ಇನ್ನು ಕೆಲವೇ ದಿವಸಗಳಲ್ಲಿ ಇದನ್ನು ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.